ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೋರ್ಟ್ ಮಾಹಿತಿ


ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ   ದಿನಾಂಕ : DATE : 11/01/2020

# ವಾರದಲ್ಲಿ ಕಾಶ್ಮೀರ ನೆಟ್‌ಗಾಗಿ

## ನಿಷೇಧಾಜ್ಞೆ ಮರುಪರಿಶೀಲನೆಗೆ ಸುಪ್ರೀಂ ಆದೇಶ

ವಿಜಯವಾಣಿ ಸುದ್ದಿಜಾಲ ನವದೆಹಲಿ

ಸಂವಿಧಾನದ 370ನೇ ವಿಧಿಯನ್ವಯ ಜಮ್ಮು-ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ ಬಳಿಕ (ಆ.5) ಆ ರಾಜ್ಯದ ಇಂಟರ್‌ನೆಟ್ ಆಧಾರಿತ ಸಾರ್ವಜನಿಕ ವ್ಯವಸ್ಥೆಗಳ ಮೇಲೆ ಕೇಂದ್ರ ಸರ್ಕಾರ ಹೇರಿದ್ದ ನಿಷೇಧಾಜ್ಞೆಗಳನ್ನು ಹಿಂಪಡೆದುಕೊಳ್ಳುವ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ಮಹತ್ವದ ಆದೇಶ ಪ್ರಕಟಿಸಿದೆ. ಇಂಟರ್‌ನೆಟ್ ಮತ್ತು ದೂರವಾಣಿ ಮಾಧ್ಯಮದ ಮೂಲಕ ಬಳಸಿಕೊಳ್ಳುವ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ವ್ಯಾಪಾರ-ವಾಣಿಜ್ಯದ ಹಕ್ಕುಗಳಿಗೆ ಸಂವಿಧಾನದಲ್ಲಿ ರಕ್ಷಣೆ ನೀಡಲಾಗಿದೆ ಎಂದು ಸಾರಿದ ನ್ಯಾ.ಎನ್.ವಿ. ರಮಣ ನೇತೃತ್ವದ ತ್ರಿಸದಸ್ಯ ಪೀಠ, ಸರ್ಕಾರಿ ವೆಬ್‌ಸೈಟ್, ಸ್ಥಳೀಯ ಇ-ಬ್ಯಾಂಕಿಂಗ್ ಸೇವೆ, ಆಸ್ಪತ್ರೆ ನಿರ್ವಹಣೆ ಹಾಗೂ ಮತ್ತಿತರ ಅಗತ್ಯ ಸೇವೆಗಳು ಇಂಟರ್‌ನೆಟ್ ಪ್ರೇರಿತವಾಗಿ ನಡೆಯುತ್ತವೆ. ಆದರೆ ಈ ಕ್ಷೇತ್ರಗಳಲ್ಲಿ ತಕ್ಷಣಕ್ಕೆ ಇಂಟರ್‌ನೆಟ್ ಸೇವೆ ಆರಂಭಗೊಳ್ಳುವ ಲಕ್ಷಣಗಳು ಕಾಣುತ್ತಿಲ್ಲ. ಹೀಗಾಗಿ, ಜೆ-ಕೆ ಆಡಳಿತ ಈ ನಿಷೇಧಾಜ್ಞೆಗಳ ಬಗ್ಗೆ ಒಂದು ವಾರದೊಳಗೆ ಪುನರ್ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದೆ. ಪುಟ 14




### ಕೋರ್ಟ್ ಹೇಳಿದ್ದು

- ನಿರಂತರವಾಗಿ ಜೆ-ಕೆಯಲ್ಲಿ ಕರ್ಫ್ಯೂ ಹೇರುವ ನಿರ್ಧಾರ ಅಧಿಕಾರದ ದುರುಪಯೋಗವನ್ನು ಪ್ರತಿಬಿಂಬಿಸುತ್ತದೆ. ಇಂಥ ಆದೇಶಗಳನ್ನು ಜಾರಿ ಮಾಡುವ ಮುನ್ನ ಮ್ಯಾಜಿಸ್ಟ್ರೇಟ್‌ಗಳು ರಾಜ್ಯದ ಹಿತಾಸಕ್ತಿ ಜತೆಗೆ ವ್ಯಕ್ತಿಯ ಹಕ್ಕುಗಳನ್ನೂ ಆದ್ಯತೆಯನ್ನಾಗಿ ಪರಿಗಣಿಸಬೇಕು.
- ತುರ್ತು ಪರಿಸ್ಥಿತಿ ಇದ್ದಾಗ ಕರ್ಫ್ಯೂ ಹೇರುವುದು ಸಮರ್ಥನೀಯ. ಆದರೆ, ನಿಮ್ಮ ಕ್ರಮಗಳನ್ನು ವಿರೋಧಿಸುತ್ತಾರೆ ಎಂಬುದೊಂದೇ ಕರ್ಫ್ಯೂ ಜಾರಿಗೆ ಕಾರಣವಾಗಬಾರದು
- ನಿಷೇಧಾಜ್ಞೆಯ ಕ್ರಮಗಳನ್ನು ನಿರ್ದಿಷ್ಟ ಅವಧಿಗೊಮ್ಮೆ ಪುನರ್ ಪರಿಶೀಲಿಸುತ್ತಿರಬೇಕು
- ಕಾನೂನಿನ ಅನ್ವಯ ನಿಷೇಧಾಜ್ಞೆ ಕೈಗೊಂಡಿಲ್ಲ ಎಂದಲ್ಲಿ ಅವುಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು.

# ವಾರದಲ್ಲಿ ಕಾಶ್ಮೀರ ನೆಟ್‌ಗಾಗಿ

ಮೊದಲನೇ ಪುಟದಿಂದ...

ಒಂದು ವೇಳೆ ಸರ್ಕಾರಕ್ಕೆ ಇಂಟರ್‌ನೆಟ್ ಸೇವೆಯನ್ನು ಸದ್ಯಕ್ಕೆ ಮರು ಆರಂಭಿಸುವ ಚಿಂತನೆ ಇಲ್ಲದಿದ್ದಲ್ಲಿ ಕನಿಷ್ಠಪಕ್ಷ ಮೇಲೆ ಹೇಳಲಾದ ಕ್ಷೇತ್ರಗಳನ್ನು ಆದ್ಯತೆಗೆ ತೆಗೆದುಕೊಂಡು ಇಂಟರ್‌ನೆಟ್ ಸೇವೆ ಒದಗಿಸಬೇಕು ಎಂದೂ ಸಲಹೆ ನೀಡಿದೆ. ಇಂಟರ್‌ನೆಟ್ ಹಕ್ಕಿನ ಬಗ್ಗೆ ನ್ಯಾಯಪೀಠ ನಿರ್ದಿಷ್ಟ ಅಭಿಪ್ರಾಯ ಹೊರಹಾಕದಿದ್ದರೂ, ಅಭಿವ್ಯಕ್ತಿ ಸ್ವಾತಂತ್ರ್ಯ, ವ್ಯಾಪಾರ-ವಾಣಿಜ್ಯದ ಹಕ್ಕಿನ ಪಾಲನೆಗೆ ಇಂಟರ್‌ನೆಟ್‌ನ ಅಗತ್ಯದ ಬಗ್ಗೆ ಒತ್ತಿಹೇಳಿದೆ.



ಕೇಂದ್ರ ಸರ್ಕಾರ ಹೇರಿದ್ದ ನಿರ್ಬಂಧಗಳ ವಿರುದ್ಧ ಕಾಂಗ್ರೆಸ್ ಮುಖಂಡ ಗುಲಾಂನಬಿ ಆಜಾದ್, 'ಕಾಶ್ಮೀರ ಟೈಮ್ಸ್' ಕಾರ್ಯನಿರ್ವಾಹಕ ಸಂಪಾದಕಿ ಅನುರಾಧ ಭಾಸಿನ್ ಸೇರಿ ಹಲವರು ಸುಪ್ರೀಂ ಮೊರೆ ಹೋಗಿದ್ದರು.

**ಅಸಮಾಧಾನ:** ಕೇಂದ್ರದ ಕ್ರಮಗಳ ಕುರಿತಂತೆ ತೀರ್ಪಿನಲ್ಲಿ ಪರೋಕ್ಷ ಅಸಮಾಧಾನ ಪ್ರಕಟಿಸಿರುವ ನ್ಯಾ.ಎನ್.ವಿ. ರಮಣ, ಈ ಕಾಲದಲ್ಲಿ ಇಂಟರ್‌ನೆಟ್‌ನ ಮಹತ್ವ ಕಡೆಗಣಿಸುವಂತಿಲ್ಲ. ಇದು ಬದುಕಿನ ಅವಿಭಾಜ್ಯ ಅಂಗವಾಗಿದೆ. ನಿರ್ದಿಷ್ಟ ಅವಧಿಗೆ ದೂರವಾಣಿ, ಇಂಟರ್‌ನೆಟ್ ಸೇವೆ ರದ್ದು ಮಾಡಬಹುದು. ಆದರೆ, ಅನಿರ್ದಿಷ್ಟಾವಧಿಗೆ ನಿಷೇಧಾಜ್ಞೆ ಮುಂದುವರಿಸುವುದು ಕಾನೂನಿಗೆ ವಿರುದ್ಧ ಎಂದು ಸಂವಿಧಾನದ ವಿವಿಧ ವಿಧಿಗಳನ್ನು ಉಲ್ಲೇಖಿಸಿ ತಿಳಿಸಿದ್ದಾರೆ.